Misc No.12/2018
P.W.:1

ಈ ದಿನ ದಿಃ28.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಎದುರುದಾರರ ಪರ ಶ್ರೀ ಎಟಿಎಸ್ ವಕೀಲರಿಂದಃ**

1ನೇ ಎದುರುದಾರ ನನಗೆ ತಂದೆಯಾಗಬೇಕು. 2ನೇ ಎದುರುದಾರಳು 1ನೇ ಎದುರುದಾರನ 2ನೇ ಹೆಂಡತಿಯಾಗಿರುತ್ತಾಳೆ. 3 ಮತ್ತು 4ನೇ ಎದುರುದಾರರು 1 ಮತ್ತು 2ನೇ ಎದುರುದಾರರ ಮಕ್ಕಳಾಗಿರುತ್ತಾರೆ ಎಂದರೆ ಸರಿ. 5 ಮತ್ತು 6ನೇ ಎದುರುದಾರರು ನನ್ನ ತಂದೆಯ ಸಹೋದರರಾಗಬೇಕು. 7ನೇ ಎದುರುದಾರ ನನ್ನ ತಂದೆಯ ತಂಗಿ ಎಂದರೆ ಸರಿ.

ನಮಗೂ ಕುಟುಂಬದ ಜಮೀನು ಬೇಕು ಎಂದು ದಾವೆ ಸಲ್ಲಿಸಿದ್ದೇವು. ನನ್ನ ಮದುವೆಯಾಗಿ ಅಂದಾಜು 20 ರಿಂದ 22 ವರ್ಷ ಆಗಿರುತ್ತದೆ. ನಾನು ಮದುವೆಯಾದ ನಂತರ ಬೆಂಗಳೂರಿನಲ್ಲಿ ವಾಸವಿರುತ್ತೇನೆ ಎಂದರೆ ಸರಿ. ನಾನು ಈಗಲೂ ಬೆಂಗಳೂರಿನಲ್ಲಿ ವಾಸವಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಗಂಡ ತೀರಿಕೊಂಡ ನಂತರ ನನ್ನ ಸ್ವಂತ ಗ್ರಾಮವಾದ ಚೀಲೂರು ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿರುತ್ತೇನೆ. ನಾನು ಚೀಲೂರು ಗ್ರಾಮದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಿಗಳರಹಳ್ಳಿಯಲ್ಲಿ ನನ್ನ ದೊಡ್ಡಮ್ಮನ ಜೊತೆಯಲ್ಲಿ ವಾಸವಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಇಬ್ಬರೂ ಹೆಣ್ಣುಮಕ್ಕಳಿರುತ್ತಾರೆ ಎಂದರೆ ಸರಿ. ನನ್ನ ಗಂಡ ತೀರಿದ ನಂತರ ಎದುರುದಾರರೇ ನನ್ನ ಎಲ್ಲಾ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

5-6 ಜಮೀನುಗಳ ಕುರಿತು ದಾವೆ ಸಲ್ಲಿಸಿದ್ದೇನು. ಸದರಿ ಜಮೀನುಗಳ ಸರ್ವೆ ನಂಬರ್ ಗಳನ್ನು ಹೇಳಲು ಬರುವುದಿಲ್ಲ. ನಾನು ದಾವೆ ನಡೆಸುವ ಕಾಲಕ್ಕೆ ನಾನು ವಕೀಲರನ್ನು ಬದಲಾಯಿಸಿದ್ದೆ ಎಂದರೆ ಸರಿ. ವಕೀಲರನ್ನು ಬದಲಾವಣೆ ಮಾಡಿದ ನಂತರ ನಾನು ಎಂದಿಗೂ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ

ಸಾಕ್ಷಿಯು ನಾನು ಕೂಲಿ ಕೆಲಸಕ್ಕೆ ಹೋಗುತ್ತಿದ್ದುದ್ದರಿಂದ ಬರಲು ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಿನ ನಾನು ನ್ಯಾಯಾಲಯಕ್ಕೆ ಹಾಜರಾಗದೆ ಇದ್ದುದ್ದರಿಂದ ಮತ್ತು ನಮ್ಮ ವಕೀಲರು ಪ್ರಕರಣದಲ್ಲಿ ಹಾಜರಾಗದೆ ಇರುವುದರಿಂದ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಿನ ಸಂಜೆಯವರೆಗೂ ಪ್ರಕರಣವನ್ನು ಕಾಯಿದಿಟ್ಟು ನಾನು ಬರದೆ ಇದ್ದುದ್ದರಿಂದ ಅಂತಿಮವಾಗಿ ಸಂಜೆ ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನ ನ್ಯಾಯಾಲಯಕ್ಕೆ ಹಾಜರಾದಲ್ಲಿ ಪ್ರಕರಣ ಬೇಗ ಇತ್ಯಾರ್ಥ ಆಗಬಹುದು ಮತ್ತು ಇತ್ಯಾರ್ಥ ಆದಲ್ಲಿ ನನ್ನ ಚಿಕ್ಕಮ್ಮಳಿಗೆ ಸ್ವಾಧೀನಪಡಿಸಿಕೊಂಡಂತೆ ಪರಿಹಾರದ ಮೊತ್ತವನ್ನು ಪಡೆದುಕೊಳ್ಳುತ್ತಾರೆ, ಅವರಿಗೆ ಸದರಿ ಮೊತ್ತ ಬೇಗ ಸಿಗಬಾರದು ಎನ್ನುವ ಉದ್ದೇಶದಿಂದ ದಾವೆಯನ್ನು ವಿಳಂಬ ಮಾಡುವುದಕೋಸ್ಕರ ನಾನು ಸದರಿ ದಿನ ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ವಕೀಲರಿಗೆ ಕೇವಲ ದಾವೆ ಚಾಲ್ತಿಯಲ್ಲಿಟ್ಟುಕೊಂಡು ದಿನ ಕಳೆಯಲು ಸೂಚಿಸಿದ್ದರಿಂದ ನಾನು ಸದರಿ ದಿನ ನ್ಯಾಯಾಲಯಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಎದುರುದಾರನಿಗೆ ತೊಂದರೆ ಕೊಡಲು ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಬರೆದ ಸಂಗತಿಗಳು ಸುಳ್ಳಿನಿಂದಕೂಡಿರುತ್ತವೆ ಎಂದರೆ ಸರಿಯಲ್ಲ. ಸದರಿ ದಿನ ನಾನು ಕೂಲಿ ಕೆಲಸಕ್ಕೆ ಹೋಗಿದ್ದರಿಂದ ನ್ಯಾಯಾಲಯಕ್ಕೆ ಬಂದಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿಯನ್ನು ಮಾನ್ಯ ಮಾಡಲು ಸಕಾರಣಗಳು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.